
UASB LIBRARY
Newspaper Clippings
Pg .1 Wednesday 01-09-2021 Jai Kisan



ಒಂದು ದಿನದ ತಾಂತ್ರಿಕ ತರಬೇತಿ

ಬೆಂಗಳೂರು: ಹುಳಿಮಾವು ತೋಟಗಾರಿಕೆ ಜೈವಿಕ ಕೇಂದ್ರದಲ್ಲಿ ನಗರವಾಸಿಗಳಿಗೆ, ರೈತರಿಗೆ, ಸಾರ್ವಜನಿಕ ಹಾಗೂ ವಿದ್ಯಾರ್ಥಿಗಳಿಗೆ ಸಸ್ಯಾಭಿವೃದ್ಧಿ ತಾಂತ್ರಿಕತೆ ಕುರಿತಾಗಿ ಒಂದು ದಿನ ತರಬೇತಿಯ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಆಸಕ್ತರು ಒಂದು ದಿನ ತರಬೇತಿಗೆ 250 ರುಪಾಯಿ ಶುಲ್ಕವನ್ನು ಪಾವತಿಸಿ ತರಬೇತಿಯ ಸದುಪಯೋಗ ಪಡೆದುಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ನಿರ್ದೇಶನಾಲಯ ಜೈವಿಕ ಕೇಂದ್ರ. ಹುಳಿಮಾವು. ಬೆಂಗಳೂರು ಇವರನ್ನು ಅಥವಾ ದೂರವಾಣಿ ಸಂಖ್ಯೆ:94498 33153, 90667 64248, ಸಂಪರ್ಕಿಸಬಹುದು ಎಂದು ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಗೆ ತಿಳಿಸಿದ್ದಾರೆ.

ಬೆಳೆ ಸಮೀಕ್ಷೆಗೆ ಎಲ್ಲರೂ ಕೈಜೋಡಿಸಿ

ಬೆಂಗಳೂರು: ಈ ಬಾರಿಯ ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆ ಯಶಸ್ಸಿಗೆ ಎಲ್ಲರೂ ಕೈಜೋಡಿಸಿ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಮನವಿ ಮಾಡಿದ್ದಾರೆ. ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆ ಬಗ್ಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ ವರ್ಷದಿಂದ ಕೈಗೊಂಡಿರುವ ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆ ದೇಶದ್ಯಾಂತ ಗಮನ ಸೆಳೆದಿದ್ದು, ಕೇಂದ್ರದಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಈ ಮೊಬೈಲ್ ಬೆಳೆ ಸಮೀಕ್ಷೆ ಈ ಬಾರಿಯೂ ಕೂಡ ಯಶಸ್ವಿಯಾಗಬೇಕೆಂದು ಕೇಳಿಕೊಂಡಿದ್ದಾರೆ. ಕಳೆದ ವರ್ಷ ರಾಜ್ಯಾದ್ಯಂತ ಬೆಳೆ ಸಮೀಕ್ಷೆ ಕ್ಷಿಪ್ರ ಗತಿಯಲ್ಲಿ ಇತರೆ ಇಲಾಖೆಗಳ ಸಹಯೋಗದಲ್ಲಿ ಕೈಗೊಂಡು ಯಶಸ್ವಿಯೂ ಆಗಿದೆ. ಇತರೆ ರಾಜ್ಯಗಳಿಗೆ ಕರ್ನಾಟಕ ಕೃಷಿ ಇಲಾಖೆಯ ಈ ಸಾಧನೆ ಮಾದರಿಯೂ ಆಗಿದೆ. ಕೇಂದ್ರದಿಂದ ಅಗ್ರಿ ಟ್ರೆಂಡ್ ಸೆಟ್ಟರ್ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇಂತಹ ಸಾಧನೆ ಇನ್ನು ಮುಂದೆಯೂ ಆಗಬೇಕು. ರೈತ ತಾನೇ ತನ್ನ ಬೆಳೆಗೆ ಪ್ರಮಾಣ ಪತ್ರ ನೀಡುವಂತಹ ಜಮೀನಿಗೆ ಸರಕಾರದ ಸೌಲಭ್ಯಗಳನ್ನು ಪಡೆಯಲು ಅರ್ಹನೆಂದು ಹೇಳಿಕೊಳ್ಳುವಂತಹ ಮೊಬೈಲ್ ಬೆಳೆ ಸಮೀಕ್ಷೆ ನಿರಂತರ ನಡೆಯಬೇಕು ಎಂದರು.



01-09-2021 Vsv Pg 03

2 ಕೋಟಿ ತಾಕುಗಳಲ್ಲಿ ಸಮೀಕ್ಷೆ

ಬೆಂಗಳೂರು: ಮುಂಗಾರು ಹಂಗಾಮಿನಲ್ಲಿ ಸುಮಾರು 2.09 ಕೋಟಿ ತಾಕು(ಕ್ಷೇತ್ರ)ಗಳಲ್ಲಿ ಬೆಳೆ ಸಮೀಕ್ಷೆ ಕಾರ್ಯ ಕೈಗೊಳ್ಳಲಿದ್ದು, ರೈತರಿಂದ ಬೆಳೆ ಮಾಹಿತಿಯನ್ನು ಆ್ಯಪ್ ಮೂಲಕ ಅಪ್‌ಲೋಡ್ ಮಾಡಿಸುವ ಉದ್ದೇಶ ಹೊಂದಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.




2021-22ನೇ ಸಾಲಿನ ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆ ಪ್ರಗತಿ ಕುರಿತು ವಿಕಾಸಸೌಧದ ಕಚೇರಿಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಮಂಗಳವಾರ ಸಚಿವರು ಸಭೆ ನಡೆಸಿದರು.

2021-22ನೇ ಸಾಲಿನ ಪೂರ್ವ ಮುಂಗಾರಿನಲ್ಲಿ 2.94 ಲಕ್ಷ ತಾಕುಗಳನ್ನು ರೈತರೇ ಖುದ್ದು ಹಾಗೂ 44.77 ಲಕ್ಷ ತಾಕುಗಳನ್ನು ಖಾಸಗಿಯವರ ಮೂಲಕ ಆ್ಯಪ್‌ನಲ್ಲಿ ಮಾಹಿತಿ ದಾಖಲು ಮಾಡಿದ್ದಾರೆ. 2021-22ನೇ ಸಾಲಿನ ಮುಂಗಾರಿನಲ್ಲಿ 6.18 ಲಕ್ಷ ತಾಕುಗಳನ್ನು ರೈತರೇ ಖುದ್ದು ಹಾಗೂ 0.66 ಲಕ್ಷ ತಾಕುಗಳನ್ನು ಖಾಸಗಿಯವರಿಂದ ಆ್ಯಪ್‌ನಲ್ಲಿ ಆ.30ರವರೆಗೆ ಅಪ್‌ಲೋಡ್ ಮಾಡಿದ್ದು, ಸಮೀಕ್ಷೆ ಪ್ರಗತಿಯಲ್ಲಿದೆ ಎಂದರು.

01-09-2021 Vv Pg 07

ಬ್ಯಾಡಗಿ ಮೆಣಸಿನಕಾಯಿ, ಅಪ್ಪೆ ಮಿಡಿ, ಹಡಗಲಿ ಮಲ್ಲಿಗೆಗೆ 'ಅಂಚೆ ಸೊಬಗು'

ಹುಬ್ಬಳ್ಳಿ: ಹಡಗಲಿ ಮಲ್ಲಿಗೆ, ಕಿನ್ನಾಳ ಕಲೆಯ 'ಕಿನ್ನಾಳ ಗೊಂಬೆಗಳು', ಅಪ್ಪೆಮಿಡಿ ಮಾವಿನ ಕಾಯಿಯ ವಿಶೇಷ ಲಕೋಟೆ ಹಾಗೂ ಬ್ಯಾಡಗಿ ಮೆಣಸಿನಕಾಯಿ ಭಾವಚಿತ್ರವುಳ್ಳ ವಿಶೇಷ ಅಂಚೆ ಚೀಟಿಯನ್ನು ಮಂಗಳವಾರ ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ಬಿಡುಗಡೆ ಮಾಡಲಾಯಿತು. ಭೌಗೋಳಿಕವಾಗಿ ಸ್ಥಾನ ಪಡೆದಿರುವ ಹಡಗಲಿ ಮಲ್ಲಿಗೆ, ಕಿನ್ನಾಳದ ಸಾಂಪ್ರದಾಯಿಕ ಮರದ ಆಟಿಕೆ, ಧಾರ್ಮಿಕ ವಿಗ್ರಹಗಳ ತಯಾರಿಕೆ ಕಲೆ, ಜಿಐ 132 ಮಾನ್ಯತೆ ಪಡೆದಿರುವ ಮಲೆನಾಡು ಭಾಗದ ಉಪ್ಪಿನ ಕಾಯಿಯ ರಾಜ 'ಅಪ್ಪೆಮಿಡಿ ಮಾವಿನ ಕಾಯಿ' ಹಾಗೂ ವಿಶ್ವವಿಖ್ಯಾತ ಬ್ಯಾಡಗಿ ಮೆಣಸಿನಕಾಯಿ ಬೆಳೆಯನ್ನು ಇನ್ನಷ್ಟು ಪ್ರಚಾರಗೊಳಿಸಿ ವಿಶ್ವದ ಇನ್ನಿತರ ರಾಷ್ಟ್ರಗಳಿಗೆ ತಲುಪಿಸಲು ಇದು ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರ ಇತ್ತೀಚೆಗೆ ಬ್ಯಾಡಗಿ ಮೆಣಸಿನಕಾಯಿಗೆ ಪೇಟೆಂಟ್ ಘೋಷಿಸಿದ ಬೆನ್ನಲ್ಲೇ ಅಂಚೆ ಇಲಾಖೆ ಅಂಚೆ ಚೀಟಿ ಬಿಡುಗಡೆಗೊಳಿಸಿರುವುದು ವಿಶೇಷ. ಐತಿಹಾಸಿಕ ಹಿನ್ನೆಲೆ ಹೊಂದಿರುವ ಹಡಗಲಿ ಮಲ್ಲಿಗೆ ಹಿಂದೆ ವಿಜಯನಗರ ಸಾಮ್ರಾಜ್ಯದಲ್ಲಿ ಭಾರೀ ಮಹತ್ವ ಪಡೆದಿತ್ತು. ಇಂದು ದೇಶ, ವಿದೇಶದಲ್ಲಿಯೂ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದ್ದು, ಮಾರುಕಟ್ಟೆ ವಿಸ್ತರಣೆಗೆ ಕೇಂದ್ರ ಸರ್ಕಾರದ ಕ್ರಮ ಪೂರಕವಾಗಲಿದೆ. ಮಲೆನಾಡಿನ ಸಾಂಸ್ಕೃತಿಕ ಸಂಕೇತವಾಗಿರುವ ಅಪ್ಪೆಮಿಡಿಗೆ ರಾಷ್ಟ್ರೀಯ ಮಾನ್ಯತೆ ಇದರಿಂದ ಸಿಕ್ಕಂತಾಗಿದೆ.



01-09-2021 Uv Pg 05

"Today is a great day to smile & be happy"

For more information visit
University Library Website
Web - uasbagrilibindia.org
E-mail- librarian@uasbangalore.edu.in

ಮನೆ ಬಾಗಿಲಿಗೆ ಹಣ್ಣು,ತರಕಾರಿ



ಬೆಂಗಳೂರು: ಮೊಬೈಲ್ ಆ್ಯಪ್ ಮೂಲಕ ಗ್ರಾಹಕರು ಹಣ್ಣು-ತರಕಾರಿಗೆ ಆರ್ಡರ್ ಮಾಡಿದ 2 ಗಂಟೆಯಲ್ಲಿ ತಲುಪಿಸಲಾಗುವುದು ಎಂದು ತೋಟಗಾರಿಕಾ ಸಚಿವ ಮುನಿರತ್ನ ತಿಳಿಸಿದರು.

ಹಾಪ್‌ಕಾಮ್ಸ್‌ನ ಕೇಂದ್ರ ಕಚೇರಿ ಆವರಣದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಆನ್‌ಲೈನ್ ಮಾರುಕಟ್ಟೆ ಮೂಲಕ ಹಾಪ್‌ಕಾಮ್ಸ್ ಹಣ್ಣು-ತರಕಾರಿ ಒದಗಿಸುವ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ನೇರವಾಗಿ ಗ್ರಾಹಕರ ಮನೆಗೆ ತಲುಪಿಸುವ ಯೋಜನೆ ಇದಾಗಿದ್ದು ಮೂರು ತಿಂಗಳ ಕಾಲ ಪ್ರಾಯೋಗಿಕವಾಗಿ ನಡೆಯಲಿದೆ ಎಂದರು.

> 2-3 ತಿಂಗಳಲ್ಲಿ ಯೋಜನೆಯ ಲೋಪದೋಷಗಳನ್ನು ಸರಿಪಡಿಸಿ ಅರ್ಧಗಂಟೆಯಲ್ಲಿ ಗ್ರಾಹಕರ ಮನೆಗೆ ಹಣ್ಣು-ತರಕಾರಿ ತಲುಪಿಸುವ ಉದ್ದೇಶ ಹೊಂದಲಾಗಿದೆ. ಸ್ಥಳೀಯ ಹಾಪ್‌ಕಾಮ್ಸ್ ಮೂಲಕ ನೀಡಬೇಕೇ ಇಲ್ಲವೇ ಹಾಪ್‌ಕಾಮ್ಸ್ ಕೇಂದ್ರ ಕಚೇರಿ ಮೂಲಕವೇ ನೀಡಬೇಕೆ ಎಂಬ ಬಗ್ಗೆ ಎರಡು-ಮೂರು ದಿನಗಳಲ್ಲಿ ನಿರ್ಧಾರ ಮಾಡಲಾಗುವುದು.
>
> ■ ಮುನಿರತ್ನ | ಸಚಿವರು

ಆರ್ಡರ್ ಮಾಡಿದ ನಂತರ ಹಣ್ಣು-ತರಕಾರಿಗಳನ್ನು ಮನೆಗೆ ತಲುಪಿಸುವ ಅಂತರವನ್ನು ಮತ್ತಷ್ಟು ಕಡಿಮೆ ಮಾಡುವ ಕುರಿತು ಪರಿಶೀಲಿಸಲಾಗುವುದು ಎಂದ ಅವರು, ಬೆಂಗಳೂರಿನಲ್ಲಿ ಜನಸಂದಣಿ ಹೆಚ್ಚಾಗಿದ್ದು ಅಂಗಡಿಗೆ ಹೋಗಿ ಗ್ರಾಹಕರು ಹಣ್ಣು ಮತ್ತು ತರಕಾರಿಗಳನ್ನು ಖರೀದಿಸಲು ಕಷ್ಟವಾಗಿರುವ ಹಿನ್ನೆಲೆಯಲ್ಲಿ ಹಾಪ್‌ಕಾಮ್ಸ್ ಆ್ಯಪ್ ಮೂಲಕ ಈ ಯೋಜನೆ ಜಾರಿಗೆ ತರಲಾಗಿದೆ. ಇದರಿಂದ ಗ್ರಾಹಕರು ಮತ್ತು ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ಮೆ: ಕೋಡ್ ಕೆಟಲಿಸ್ಟ್ ಪ್ರೈ.ಲಿ. ಅವರನ್ನು ಪ್ಯಾಕಿಂಗ್ ಮತ್ತು ಡೆಲಿವರಿ ಪಾರ್ಟ್ನರ್ ಆಗಿ ಆಯ್ಕೆ ಮಾಡಲಾಗಿದೆ. ಹಾಪ್‌ಕಾಮ್ಸ್ ನಿಗದಿಪಡಿಸಿರುವ ದರದಲ್ಲಿ ಗ್ರಾಹಕರು ಖರೀದಿಸಬೇಕು ಮತ್ತು ಡಿಲಿವರಿ ಚಾರ್ಜಸ್ ಕೂಡ ಭರಿಸಬೇಕಾಗುತ್ತದೆ ಎಂದರು.

01-09-2021 Sk Pg 09

ಅಧಿಕಾರಿಗಳ ನಡುವೆ ಸಮನ್ವಯ ಇಲ್ಲ

ರಾಜ್ಯದಲ್ಲಿ 15ಕ್ಕೂ ಹೆಚ್ಚು ಎನ್‌ಜಿಒಗಳ ಸಹಯೋಗದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ, ನಬಾರ್ಡ್ ಅಡಿ ಆರಂಭಗೊಂಡ 200ಕ್ಕೂ ಹೆಚ್ಚು ಎಫ್‌ಪಿಒಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮನ್ವಯವೇ ಇಲ್ಲದಂತಾಗಿದೆ. ಚಿಕ್ಕಬಳ್ಳಾಪುರ, ರಾಮನಗರ, ಕೋಲಾರ, ಚಿಕ್ಕಮಗಳೂರು ಸೇರಿದಂತೆ ರಾಜ್ಯಾದ್ಯಂತ ಕಳೆದೆರಡು ವರ್ಷಗಳಲ್ಲಿ ಎಫ್‌ಪಿಒಗಳ ಕುಂದು ಕೊರತೆ ನಿವಾರಣೆ ಸಭೆಗಳನ್ನೇ ಆಯೋಜಿಸಿಲ್ಲ. ಒಂದು ಕಡೆ ರೈತರ ಮೂಲ ಬಂಡವಾಳವನ್ನು ಬಳಸಲಾಗದೆ, ಸರಕಾರದಿಂದ ಅನುದಾನ ಸಿಗದೆ ಬಹುತೇಕ ಎಫ್‌ಪಿಒಗಳ ಸಿಇಒಗಳು ಕೆಲಸದಿಂದ ವಿಮುಖರಾಗುತ್ತಿದ್ದಾರೆ. ಬಾಡಿಗೆ ಕಟ್ಟಲಾಗದ ಎಫ್‌ಪಿಒ ಕಚೇರಿಗಳನ್ನು ಖಾಲಿ ಮಾಡುವ ಸ್ಥಿತಿಗೆ ಬಂದಿವೆಯೆಂದು ಚಿಕ್ಕಮಗಳೂರು ಎಫ್‌ಪಿಒ ಸಿಬ್ಬಂದಿ ತಮ್ಮ ಬೇಸರವನ್ನು ಹೊರಹಾಕಿದ್ದಾರೆ.

ಆರಂಭದಲ್ಲೇ ಮುಚ್ಚುವ ಸ್ಥಿತಿ ತಲುಪಿದ ರೈತ ಉತ್ಪಾದಕ ಸಂಸ್ಥೆಗಳು | ಸರಕಾರದ 10 ಲಕ್ಷ ರೂ. ಅನುದಾನ ಸಿಗದೆ ವೇತನಕ್ಕೆ ಹಣವಿಲ್ಲ

ರೈತ ಉತ್ಪಾದಕ ಸಂಸ್ಥೆಗಳಿಗೆ ಎದುರಾಗಿದೆ ಆರ್ಥಿಕ ಸಂಕಷ್ಟ

■ ಶ್ರೀಧರ್ ಆರ್ ರಾಮನಗರ
■ ನಾಗರಾಜು ಅಶ್ವತ್ಥ್ ಬೆಂಗಳೂರು ಗ್ರಾಮಾಂತರ
nagvk4u@gmail.com

ಮಧ್ಯವರ್ತಿಗಳ ಹಸ್ತಕ್ಷೇಪ ತಪ್ಪಿಸಿ, ರೈತರಿಗೆ ನೇರ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವಲ್ಲಿ ನೆರವಾಗುತ್ತಿದ್ದ ರೈತ ಉತ್ಪಾದಕ ಸಂಸ್ಥೆಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ.

ಕಳೆದೆರಡು ವರ್ಷಗಳಲ್ಲಿ ರಾಜ್ಯದಲ್ಲಿ ಆರಂಭಗೊಂಡಿರುವ 200ಕ್ಕೂ ಹೆಚ್ಚು ಎಫ್‌ಪಿಒಗಳು ಸಿಬ್ಬಂದಿಗೆ ವೇತನ ಪಾವತಿಗೂ ಪರದಾಡುತ್ತಿದ್ದು, ಬಹುತೇಕ ಬಾಗಿಲು ಮುಚ್ಚಲು ಸಿದ್ಧತೆ ನಡೆಸುತ್ತಿವೆ. ಸರಕಾರ ಒದಗಿಸಬೇಕಿದ್ದ 10 ಲಕ್ಷ ರೂ. ಅನುದಾನ ಸಿಗದೆ ಇರುವುದರಿಂದ ರೈತರಿಗೆ ನೆರವಾಗಬೇಕಿದ್ದ ಸಂಸ್ಥೆಗಳು ನಷ್ಟದ ಹಾದಿಯಲ್ಲಿವೆ.

ಕನಿಷ್ಠ 1 ಸಾವಿರ ರೈತರು ಶೇರುದಾರರಾಗಿ ತಲಾ 1 ಸಾವಿರ ರೂ. ಹೂಡಿಕೆಯೊಂದಿಗೆ ಆರಂಭವಾಗುವ ಎಫ್‌ಪಿಒಗೆ ಸರಕಾರದಿಂದ 10 ಲಕ್ಷ ಅನುದಾನ ಲಭಿಸುತ್ತದೆ. ಆ ಹಣದಲ್ಲಿ ಒಂದು ಕಚೇರಿ, ಇಬ್ಬರು ಸಿಬ್ಬಂದಿ ನೇಮಕ ಮಾಡಿಕೊಳ್ಳಬಹುದು. ಕ್ರಮೇಣ ಎಫ್‌ಪಿಒ ತನ್ನ ವ್ಯವಹಾರಗಳಿಂದ ಪಡೆದ ಲಾಭಾಂಶದಲ್ಲಿ ಖರ್ಚು ನಿಭಾಯಿಸಿಕೊಳ್ಳಬಹುದು. ಕಳೆದೆರಡು ವರ್ಷಗಳಲ್ಲಿ ರಾಜ್ಯಾದ್ಯಂತ ಆರಂಭವಾಗಿರುವ ಬಹುತೇಕ ಎಫ್‌ಪಿಒಗಳಿಗೆ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ಹೀಗಾಗಿ, ಕೇವಲ ನೋಂದಣಿಗೆ ಸೀಮಿತವಾಗಿ ರೈತರಿಂದ ಹಣ ಸಂಗ್ರಹಿಸಿ ಸರಕಾರದ ಅನುದಾನಕ್ಕಾಗಿ ಕಾಯುತ್ತ ಕೂರುವ ಸ್ಥಿತಿ ನಿರ್ಮಾಣವಾಗಿದೆ. ಈ ನಡುವೆ ಕಚೇರಿ ಬಾಡಿಗೆ, ಸಿಬ್ಬಂದಿ ವೇತನ ನೀಡಲು ಪರದಾಡುವಂತಾಗಿದೆ.

ಆರಂಭಿಕವಾಗಿ ನೇರವಾಗಿ ಸರಕಾರವೇ ಎಫ್‌ಪಿಒಗಳ ಆರಂಭಕ್ಕೆ ವ್ಯವಸ್ಥೆ ರೂಪಿಸುತ್ತಿತ್ತು. ಆದರೆ, ಕಳೆದ ಕೆಲ ವರ್ಷಗಳಿಂದೀಚೆಗೆ ಸ್ಥಳೀಯ ಸಾಮಾಜಿಕ ಸಂಸ್ಥೆಗಳಿಗೆ ಈ ಹೊಣೆಯನ್ನು ಹೊರಿಸಿದೆ. ಹೀಗೆ ಸಾಮಾಜಿಕ ಸಂಸ್ಥೆಗಳ ಒಡಂಬಡಿಕೆಯೊಂದಿಗೆ ಆರಂಭವಾಗಿರುವ ಬಹುತೇಕ ಎಫ್‌ಪಿಒಗಳ ಸ್ಥಿತಿ ತೀವ್ರ ಸಂಕಷ್ಟಕ್ಕೆ ತಲುಪಿದ್ದು, ಸಿಬ್ಬಂದಿಗೆ ಸಕಾಲಕ್ಕೆ ವೇತನ ನೀಡಲಾಗುತ್ತಿಲ್ಲ. ಈ ವಿಚಾರವನ್ನು ಜಿಲ್ಲಾ ಮಟ್ಟದ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಹೀಗಾಗಿ, ಬಹುತೇಕ ಕಡೆ ರೈತರಿಗೆ ಎಫ್‌ಪಿಒಗಳಿಂದ ಯಾವುದೇ ನೆರವು ಸಿಗದಂತಾಗಿದೆ.



ಎಫ್‌ಪಿಒಗಳು ಆರಂಭಿಕವಾಗಿ ಶೇರುದಾರರಾಗಿ ರೈತರಿಂದ ತಲಾ 1 ಸಾವಿರ ಹಣ ಪಡೆದಿರುತ್ತಾರೆ. ಈ ಬಂಡವಾಳದಲ್ಲಿ ವ್ಯವಹಾರಗಳನ್ನಾರಂಭಿಸಿ ಎಫ್‌ಪಿಒಗಳ ಬಲವರ್ಧನೆ ಮಾಡಿಕೊಳ್ಳಬೇಕು. ಸರಕಾರದ ಅನುದಾನಕ್ಕಾಗಿ ಕಾಯದೆ ಸ್ವಂತ ಬಲದಲ್ಲಿ ಎಫ್‌ಪಿಒಗಳು ಸದೃಢವಾಗಬೇಕು.

-ಡಾ. ಸಿ.ಎನ್. ಅಶ್ವತ್ಥನಾರಾಯಣ
ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ನೆರವಿಗೆ ನಿಲ್ಲಬೇಕಾದವರೇ ಅಸಹಾಯಕ

ಮಧ್ಯವರ್ತಿಗಳಿಲ್ಲದೆ ರೈತರಿಗೆ ಮಾರುಕಟ್ಟೆ, ಅಗತ್ಯ ಕೃಷಿ ಉಪಕರಣ, ರಸಗೊಬ್ಬರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಎಫ್‌ಪಿಒ ಆರಂಭಿಸಿದ್ದೇವೆ. 2020ರ ಫೆಬ್ರವರಿಯಲ್ಲಿ ಆರಂಭವಾದ ಸಂಸ್ಥೆಗೆ ಈವರೆಗೆ ಸರಕಾರದಿಂದ ಯಾವುದೇ ಅನುದಾನ ಸಿಕ್ಕಿಲ್ಲ. ಹೀಗಾಗಿ, ಎಫ್‌ಪಿಒ ತನ್ನ ಯಾವುದೇ ವ್ಯವಹಾರವನ್ನು ಆರಂಭಿಸಲಾಗಿಲ್ಲ. ಕನಿಷ್ಠ ರೈತರಿಗೆ ರಸಗೊಬ್ಬರ ಖರೀದಿಸುವ ಕೆಲಸಕ್ಕೂ ಡೀಲರ್‌ಶಿಪ್ ಸಿಗದಂತಾಗಿದ್ದು, ಇಲಾಖೆಗಳನ್ನು ಕೇಳಿದರೆ ಕೇಂದ್ರ ಸರಕಾರದತ್ತ ಬೊಟ್ಟು ಮಾಡುತ್ತಿವೆ. ಇತ್ತ, 1 ಸಾವಿರ ರೂ. ಹೂಡಿಕೆ ಮಾಡಿರುವ ರೈತರು ಪ್ರಶ್ನಿಸುತ್ತಿದ್ದು, ಸರಕಾರ ಶೀಘ್ರ ಅನುದಾನಗಳನ್ನು ಬಿಡುಗಡೆಗೊಳಿಸಬೇಕಿದೆ ಎಂದು ರಾಮನಗರದ ಎಫ್‌ಪಿಒ ಸಿಬ್ಬಂದಿ ತಿಳಿಸಿದ್ದಾರೆ.

01-09-2021 Vk Pg 04

ಕೃಷಿ ಇಲಾಖೆಯಿಂದ ಬಿತ್ತನೆ ಬೀಜ ವಿತರಣೆ | 7,350 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ

ವರುಣ ಸಿಂಚನ, ಬಿತ್ತನೆಗೆ ಅಣಿಯಾದ ರೈತ

• ಮಹದೇವ್ ಬಿ.ಆನೇಕಲ್

ಆನೇಕಲ್: ಆನೇಕಲ್ ತಾಲೂಕು ರಾಗಿ ಕಣಜ ಎಂದೇ ಪ್ರಸಿದ್ಧವಾಗಿದೆ. ಈ ವ್ಯಾಪ್ತಿಯಲ್ಲಿ ಕೃಷಿಯನ್ನು ನಂಬಿ ಬದುಕುವ ಜನರೇ ಹೆಚ್ಚು. ಇನ್ನೂ ತಾಲೂಕಿನಲ್ಲಿ 7,350 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆ ರೈತರಿಗೆ ಅಗತ್ಯಕ್ಕನುಗುಣವಾಗಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡಿದೆ.



ತಾಲೂಕು ವ್ಯಾಪ್ತಿಯಲ್ಲಿ ಶೇ.81.64ರಷ್ಟು ಅಂದರೆ 7,141 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ ಅದರಲ್ಲಿ ಶೇ.82ರಷ್ಟು ರಾಗಿ ಬಿತ್ತನೆಯಾಗಿದೆ, ಇನ್ನೂ ದ್ವಿದಳ ಧಾನ್ಯಗಳಾದ ಜೋಳ, ತೊಗರಿ, ಸಜ್ಜೆ ಸಾಮೆ, ನವಣೆ, ಊದಲು, ಹಾರಕ ಬೆಳೆಗಳನ್ನು, ಹಲಸಂದೆ, ಕಡಲೆ ಹಿಂಗೆ 900 ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇನ್ನೂ ಎಣ್ಣೆ ಕಾಳುಗಳು 140 ಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆ, ಉಚ್ಚೆಳ್ಳು, ಎಳ್ಳು ಬೆಳೆಯುತ್ತಾರೆ.



ಬಿತ್ತನೆ ಬೀಜ: ಆನೇಕಲ್ ತಾಲೂಕಿನಲ್ಲಿ ನಾಲ್ಕು ರೈತ ಸಂಪರ್ಕ ಕೇಂದ್ರಗಳು ಇವೆ, ಇದರ ಮುಖಾಂತರ ಕೃಷಿ ಮಾಡುವ ರೈತರಿಗೆ ಸುಮಾರು 240 ಕ್ವಿಂಟಲ್‌ರಷ್ಟು ಬಿತ್ತನೆ ಬೀಜಗಳನ್ನು ದಸ್ತಾನು ಮಾಡಿಕೊಂಡು, ಅದರಲ್ಲಿ 227 ಕ್ವಿಂಟಾಲ್‌ನಷ್ಟು ವಿವಿಧ ಬಿತ್ತನೆ ಬೀಜ ಅಂದರೆ ರಾಗಿ, ತೊಗರಿ, ಹಲಸಂದೆ, ಭತ್ತ, ನೆಲಗಡಲೆ, ಪ್ರಮಾಣಿಕೃತ ಬೀಜಗಳನ್ನು ಎಲ್ಲಾ ರೈತರಿಗೆ ವಿತರಣೆ ಮಾಡಲಾಗಿದೆ.

ಬೆಳೆ ವಿಮೆ ಯೋಜನೆ: ಕೃಷಿ ಇಲಾಖೆಯಿಂದ ರಾಗಿ ಬೆಳೆಗೆ ವಿಮೆ ಮಾಡಲಾಗುತ್ತಿದೆ. ಅದರಲ್ಲಿ ತಾಲೂಕಿನಲ್ಲಿ

ಮಳೆಗಾಲ ಪ್ರಾರಂಭವಾಗಿದ್ದು ತಾಲೂಕಿ ನಾದ್ಯಂತ ರೈತರು ರಾಗಿ ಬಿತ್ತನೆ ಮಾಡಿದ್ದಾರೆ. ಕಳೆದ ಒಂದು ವಾರದಲ್ಲೇ 56 ಎಂಎಂ ಮಳೆಯಾಗಿದೆ, ರೈತರ ಕಡಲೆಕಾಯಿ ಹಾಗೂ ಇತರೆ ಬೆಳೆಗಳಿಗೆ ಮಳೆ ಬಹಳ ಅನುಕೂಲವಾಗಿದೆ.

■ ಧನಂಜಯ,
ಸಹಾಯಕ ನಿರ್ದೇಶಕ, ಕೃಷಿ ಇಲಾಖೆ

ದಿಗಂತ ವಿಶೇಷ

ಇದುವರೆಗೆ 138 ರೈತರು ಈ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಇನ್ನೂ ಬಹಳಷ್ಟು ರೈತರು ಈ ಸೌಲಭ್ಯ ಪಡೆಯಬೇಕಾಗಿದೆ.


ಪಿಎಂ ಕಿಸಾನ್ ಯೋಜನೆ: ಈ ಯೋಜನೆಗೆ ತಾಲೂಕಿನಲ್ಲಿ 15,137 ರೈತರು ನೋಂದಣಿ ಮಾಡಿಕೊಂಡಿದ್ದು ಅದರಲ್ಲಿ 14,639 ಜನರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೀಡುವ 10ಸಾವಿರ ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ. ಕೃಷಿ ಯಂತ್ರೋಪಕರಣಗಳು ಬಾಡಿಗೆಗೆ

2021 ಮುಂಗಾರು ಬೆಳೆ ಸಮೀಕ್ಷೆ

ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ಮಾಹಿತಿಯನ್ನು ಜಿಪಿಎಸ್ ಆಧಾರಿತ ಮೊಬೈಲ್ ಆ್ಯಪ್ ಬಳಸಿ ಸಮೀಕ್ಷೆ ನಡೆಸಲು ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದ್ದು, ರೈತರು ಸ್ವತ: ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಯ ವಿವರವನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ, ಗೂಗಲ್ ಪ್ಲೇ ಸ್ಟೋರ್‌ನಲ್ಲಿ 'kharif season farmer crop survey 202122 2021-22' ಎಂಬ ಹೆಸರಿನ ಮೊಬೈಲ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಸ್ವತ: ಬೆಳೆ ಮಾಹಿತಿ ದಾಖಲಿಸಬಹುದಾಗಿದೆ, ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಧನಂಜಯ ಕೋರಿದ್ದಾರೆ.

ಕೃಷಿ ಮಾಡುವುದಕ್ಕೆ ಕೃಷಿ ಕಾರ್ಮಿಕರು ಮತ್ತು ಯಂತ್ರೋಪಕರಣಗಳ ಕೊರತೆಯಿಂದ ಕೃಷಿಯಲ್ಲಿ ತೊಡಗುವುದು ತುಂಬಾ ಕಡಿಮೆ, ಹಾಗಾಗಿ ಕೃಷಿ ಇಲಾಖೆಯಿಂದ ಕಡಿಮೆ ದರದಲ್ಲಿ ಕೃಷಿಕೆಲಸಗಳಿಗೆ ರಿಯಾಯಿತಿ ದರದಲ्ಲಿ ರೈತರಿಗೆ ಯಂತ್ರೋಪಕರಣ ನೀಡಲಾಗುತ್ತಿದೆ ಇದನ್ನು ತಾಲೂಕಿನ ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಧನಂಜಯ ಅವರು ಮಾಹಿತಿ ನೀಡಿದ್ದಾರೆ.

01-09-2021
Hd Pg 09



ಮಣ್ಣಿನ ಆರೋಗ್ಯಕ್ಕೆ ಹಸಿರೆಲೆ ಗೊಬ್ಬರ

ಪ್ರತಿ 100 ಕಿಲೋ ಗ್ರಾಮ್ ವಿವಿಧ ವರ್ಗಗಳ ಹಸಿರೆಲೆ ಸಸ್ಯಗಳಲ್ಲಿ ಯಾವ ಪೋಷಕಾಂಶಗಳ ಪ್ರಮಾಣ ಎಷ್ಟು ಲಭ್ಯವಿವೆ, ಪ್ರತಿ ಎಕರೆಗೆ ಎಷ್ಟು ಪ್ರಮಾಣದಲ್ಲಿ ಬಿತ್ತನೆ ಮಾಡಬೇಕು ಹಾಗೂ ಬಿತ್ತನೆ ಮಾಡಿದ ಎಷ್ಟು ದಿನದಲ್ಲಿ ಕಟಾವು ಮಾಡಿ ಭೂಮಿಯಲ್ಲಿ ಸೇರಿಸಬೇಕು ಎಂಬುದನ್ನು ತಿಳಿದುಕೊಳ್ಳೋಣ.



ಸಾವಯವ, ನೈಸರ್ಗಿಕ ಕೃಷಿಗೆ ಬಯೋಮಾಸ್ ಅವಶ್ಯ. ಇದಕ್ಕಾಗಿ ಪ್ರಾರಂಭಿಕ ಹಂತದಲ್ಲಿ ಮಣ್ಣಿನ ಫಲವತ್ತತೆ ಕಾಪಾಡುವಲ್ಲಿ ಹಸಿರೆಲೆ ಗೊಬ್ಬರ ಅಡಿಪಾಯವಾಗಿದೆ. ಬೆಳೆಯಿಂದ ನಿರೀಕ್ಷಿತ ಇಳುವರಿ ಪಡೆಯಲು ನಾಟಿ ಪೂರ್ವದಲ್ಲಿ ಹಸಿರೆಲೆ ಗೊಬ್ಬರ ಬಳಕೆ ಅತಿ ಅಗತ್ಯ.

ಈ ಹಸಿರೆಲೆ ಗೊಬ್ಬರ ಮಣ್ಣಿಗೆ ಅವಶ್ಯವಿರುವ ಮುಖ್ಯ ಪೋಷಕಾಂಶಗಳಾದ ಸಾರಜನಕ, ರಂಜಕ ಮತ್ತು ಪೊಟ್ಯಾಶ್‌ಗಳನ್ನಲ್ಲದೆ ಇತರೆ ಲಘು,ಸೂಕ್ಷ್ಮ ಪೋಷಕಾಂಶಗಳನ್ನು ಸಹ ಒದಗಿಸುತ್ತವೆ. ಹಸಿರೆಲೆಸಸ್ಯಗಳನ್ನು ಬೆಳೆದು ಹೂವಾಗುವ ಮುಂಚೆ ಮೊಗ್ಗು ಹೊಡೆದು ಮಣ್ಣಿನಲ್ಲಿ ಬೆರೆಸಿದಲ್ಲಿ ಮುಂಬರುವ ಬೆಳೆಗೆ ಹೇರಳವಾಗಿ ಬ್ಯಾಕ್ಟೀರಿಯಾ, ಪೋಷಕಾಂಶಗಳು ಲಭಿಸಿ ಬಂಪರ್ ಬೆಳೆ ಆಗುವುದರಲ್ಲಿ ಸಂದೇಹವೇ ಇಲ್ಲ. ಮಣ್ಣಿನಲ್ಲಿನ ಉಷ್ಣಾಂಶ ಕಡಿಮೆಯಾಗಿ ಬಹಳ ದಿನಗಳವರೆಗೆ ತೇವಾಂಶವನ್ನು ಕಾಪಾಡಿಕೊಳ್ಳಬಹುದು. ಹಸಿರೆಲೆ ಗೊಬ್ಬರವು ನಾರಿನಂಶ ಹೊಂದಿದ್ದು, ಮಣ್ಣಿನಲ್ಲಿ ಬೆರೆಸಿದ ತಕ್ಷಣ ಬೇಗನೆ ಕಳೆತು ಸಾವಯವ ಅಂಶವನ್ನು ಹೆಚ್ಚಿಸುತ್ತದೆ.

ಮಣ್ಣಿನಲ್ಲಿ ಜೈವಿಕ ಸೂಕ್ಷ್ಮಾಣುಗಳ ಸಂಖ್ಯೆ ಹೆಚ್ಚಾಗಿ, ಮಣ್ಣಿನ ರಚನಾ ಸಾಮರ್ಥ್ಯ ಹೆಚ್ಚುವುದರಿಂದ ಸಾವಯವ ವಸ್ತುಗಳು ಕಳೆತು ಮುಂಬರುವ ಬೆಳೆಗೆ ಹೇರಳವಾಗಿ ಪೋಷಕಾಂಶಗಳು ಲಭ್ಯವಾಗಿ ಇಳುವರಿ ಸಾಮರ್ಥ್ಯ ಪ್ರತಿಶತ 15 ರಿಂದ 20ರಷ್ಟು ಹೆಚ್ಚುತ್ತವೆ. ಕ್ಷಾರ ಮಣ್ಣಿನ ಸುಧಾರಣೆಗೆ ಸಹಕಾರಿಯಾಗುವುದಲ್ಲದೆ, ಜಂತು ಹುಳುವಿನ ಬಾಧೆ ನಿಯಂತ್ರಣವಾಗುತ್ತದೆ. ಸಸ್ಯಗಳ ಕೊಳೆಯುವಿಕೆಯಾಗುವಾಗ ಹೊರಬರುವ ಆಮ್ಲಗಳಿಂದ ಪೋಷಕಾಂಶಗಳ ಲಭ್ಯತೆ ಹೆಚ್ಚಿಸುತ್ತದೆ. ದ್ವಿದಳ-ಧಾನ್ಯಗಳ ಸಸ್ಯಗಳು ಮಣ್ಣಿನಲ್ಲಿ ಸಾರಜನಕ ಪ್ರಮಾಣ ವೃದ್ಧಿಸುವುದಲ್ಲದೆ, ಬೇರಿನಲ್ಲಿ ಹೆಚ್ಚು ಸಾರಜನಕವನ್ನು ಕೂಡಿಡುವ ಶಕ್ತಿಯನ್ನು ಹೊಂದಿರುತ್ತವೆ.

ಹಸಿರೆಲೆ ಗೊಬ್ಬರದ ಸಸ್ಯಗಳು ಭೂಮಿಗೆ ಹೊದಿಕೆಯಾಗುವುದರಿಂದ ಮಳೆಯ ನೀರು ಹೆಚ್ಚಾಗಿ ಇಂಗಿ ಮಣ್ಣು ಕೊಚ್ಚಿ ಹೋಗುವುದನ್ನು ತಡೆಗಟ್ಟುತ್ತದೆ. ಇದರಿಂದ ಮಣ್ಣಿನ ಸವಕಳಿಕಡಿಮೆಯಾಗಿ ಪೋಷಕಾಂಶಗಳ ಸಂರಕ್ಷಣೆಯಾಗುತ್ತದೆ. ಹಸಿರೆಲೆ ಸಸ್ಯಗಳು ಆಳವಾಗಿ ಬೇರು ಬಿಡುವುದರಿಂದ ಮಣ್ಣಿನ ಕೆಳಪದರದಲ್ಲಿರುವ ಅಲಭ್ಯ ಪೋಷಕಾಂಶಗಳನ್ನು ಹೀರಿಕೊಳ್ಳುವ ಕ್ರಿಯೆ ಉಂಟಾಗುತ್ತದೆ. ನಂತರ ಈ ಹಸಿರೆಲೆಯ ಸಸ್ಯಗಳನ್ನು ಕಿತ್ತು ಮತ್ತೆ ಭೂಮಿಯಲ್ಲಿ ಸೇರಿಸುವುದರಿಂದ ಆಳದಲ್ಲಿರುವ ಸಸ್ಯ ಪೋಷಕಾಂಶಗಳನ್ನು ಮೇಲ್ಪದರಕ್ಕೆ ತಂದು ಮುಂಬರುವ ಬೆಳೆಗೆ ಕೊಟ್ಟಂತಾಗುತ್ತದೆ.

ಆಯ್ಕೆ ಸಮರ್ಪಕವಾಗಿರಲಿ

ಮಣ್ಣಿನ ಆರೋಗ್ಯ ಸುಧಾರಣೆಗೆ ಹಲವು ಪ್ರಕಾರದ ಬ್ಯಾಕ್ಟೀರಿಯಾಗಳು, ಪೋಷಕಾಂಶಗಳು ಬೇಕೆಬೇಕು. ಆದ್ದರಿಂದ ಹಸಿರೆಲೆ ಸಸ್ಯಗಳನ್ನು ಆಯ್ಕೆ ಮಾಡುವಾಗ ಸ್ಥಳೀಯ ವಾತಾವರಣದಲ್ಲಿ ಹುಲುಸಾಗಿ ಬೆಳೆಯುವ ಏಕದಳ, ದ್ವಿದಳ-ಧಾನ್ಯಗಳು, ನವ-ಧಾನ್ಯಗಳು, ಸಿರಿ-ಧಾನ್ಯಗಳು, ಸಾಂಬಾರ ಪದಾರ್ಥಗಳು ಮತ್ತು ಎಣ್ಣೆ ಕಾಳುಗಳನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ಪ್ರತಿ ಎಕರೆಗೆ 25 ಕಿಲೋ ಗ್ರಾಮ್‌ನಂತೆ ಬಿತ್ತನೆ ಮಾಡುವುದು ಸೂಕ್ತ.

ಈ ಹಸಿರೆಲೆ ಸಸ್ಯಗಳೊಂದಿಗೆ ಕಳೆಗಳು ಸಹ ಸೊಗಸಾಗಿ ಬೆಳೆಯುತ್ತವೆ. ಈ ಕಳೆಗಳಲ್ಲಿ ಔಷಧೀಯ ಗುಣವಿರುತ್ತದೆ. ಈ ಕಳೆಗಳನ್ನು ಸಹ ಹಸಿರೆಲೆ ಗೊಬ್ಬರಗಳೊಂದಿಗೆ ಮಣ್ಣಿಗೆ ಸೇರಿಸುವುದರಿಂದ ಮಣ್ಣು ಫಲವತ್ತತೆ ಹೊಂದಿ ಮುಖ್ಯ ಬೆಳೆಗೆ ಅವಶ್ಯವಿರುವ ಬ್ಯಾಕ್ಟೀರಿಯಾ, ಪೋಷಕಾಂಶಗಳನ್ನು ಒದಗಿಸುತ್ತದೆ. ರೋಗ-ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಗರಿಕೆ ಹಾಗೂ ಜೇಕು ಹೊರತುಪಡಿಸಿ ಭೂಮಿಯಲ್ಲಿ ಬೆಳೆಯುವ ಎಲ್ಲ ಕಳೆಗಳು ಹಸಿರೆಲೆ ಗೊಬ್ಬರದ ಸಸ್ಯಗಳಾಗಿವೆ.

ನಮ್ಮ ಪೂರ್ವಜರು ನಾಯಿ, ಬೆಕ್ಕು ಸೇರಿದಂತೆ ಸಾಕು ಪ್ರಾಣಿಗಳು ಸತ್ತರೆ ಗಿಡ-ಮರಗಳ ಬುಡದಲ್ಲಿ ಮುಚ್ಚುತ್ತಿದ್ದರು. ಇದರಿಂದ ಸತ್ತ ಪ್ರಾಣಿಗಳಲ್ಲಿರುವ ಬ್ಯಾಕ್ಟೀರಿಯಾಗಳು ಬೇರಿನ ಮುಖಾಂತರ ಗಿಡಗಳಿಗೆ ಲಭಿಸುವುದರಿಂದ ಸಮೃದ್ಧ ಫಲ ಪ್ರಾಪ್ತಿಯಾಗುತ್ತದೆ ಎಂಬುದು ಬಲವಾದ ನಂಬಿಕೆಯಾಗಿತ್ತು. ಅದರಂತೆ ಹಸಿರೆಲೆ ಸಸ್ಯಗಳನ್ನು ಪ್ರೌಢಾವಸ್ಥೆಯಲ್ಲಿರುವಾಗಲೆ ಕಿತ್ತು ಮರಳಿ ಮಣ್ಣಿಗೆ ಸೇರಿಸುವುದರಿಂದ ಸಸ್ಯಗಳಲ್ಲಿನ ಹೇರಳವಾದ ಪೋಷಕಾಂಶಗಳು, ಬ್ಯಾಕ್ಟೀರಿಯಾಗಳು ಮುಂದೆ ನಾಟಿ ಮಾಡುವ ಬೆಳೆಗಳಿಗೆ ಬೇರುಗಳ ಮುಖಾಂತರ ಪೂರೈಕೆಯಾಗಿ ಬಂಪರ್ ಬೆಳೆ ಪ್ರಾಪ್ತಿಯಾಗುತ್ತದೆ.

ಹಸಿರೆಲೆ ಸಸ್ಯದ ಪ್ರತಿಯೊಂದು ಭಾಗವು ಅಂದರೆ ಎಲೆ, ಎಲೆಯ ಕಾಂಡ, ಗಿಡದ ಕಾಂಡ ಮತ್ತು ಬೇರುಗಳು ಮಣ್ಣಿನ ಆರೋಗ್ಯಕ್ಕೆ ಸಹಕಾರಿಯಾಗಿವೆ. ಕೆಲವೊಂದು ಹಸಿರೆಲೆ ಸಸ್ಯಗಳನ್ನು ನಾಟಿ ಮಾಡಿದ ನಂತರ ಹೂವುಗಳು ಕಂಡ ತಕ್ಷಣ ಮೊಗ್ಗು ಹೊಡೆದು ಮಣ್ಣಿನಲ್ಲಿ ಬೆರೆಸುವುದು ಕಡ್ಡಾಯ.

■ ಬಸವರಾಜ ಗಿರಗಾಂವಿ 9980524410

01-09-2021
Sk Pg 10



ಅ.ನಂ	ಹಸಿರೆಲೆ ಸಸ್ಯಗಳ ಹೆಸರು	ಸಾರಜನಕ ಪ್ರಮಾಣ	ರಂಜಕ ಪ್ರಮಾಣ	ಪೋಟ್ಯಾಷ್ ಪ್ರಮಾಣ	ಪ್ರತಿ ಎಕರೆಗೆ ಬಿತ್ತನೆಯ ಪ್ರಮಾಣ (ಕಿ.ಗ್ರಾಂ)	ಬಿತ್ತನೆ ನಂತರ ಕೊಯ್ದು ಮಾಡಬೇಕಾದ ದಿನಗಳು
1	ಸೆಣಬು	0.89	0.12	0.51	25	45
2	ಡೈಂಚಾ	0.68	0.13	0.40	20	45
3	ಗ್ಲಿರಿಸೀಡಿಯಾ	0.68	0.16	0.30	ಬಹುವಾರ್ಷಿಕ	ಹಂತ-ಹಂತವಾಗಿ
4	ಸ್ಸೆನಿಯಾ	0.70	0.14	0.75	ವಾರ್ಷಿಕ	ಹಂತ-ಹಂತವಾಗಿ
5	ಕೋಳಂಜಿ	0.79	0.20	0.60	ಬಹುವಾರ್ಷಿಕ	ಹಂತ-ಹಂತವಾಗಿ
6	ಹೊಂಗೆ	0.16	0.14	0.49	ಬಹುವಾರ್ಷಿಕ	ಹಂತ-ಹಂತವಾಗಿ
7	ಎಕ್ಕೆ	0.42	0.12	0.67	ಬಹುವಾರ್ಷಿಕ	ಹಂತ-ಹಂತವಾಗಿ
8	ಲಂಟಾನ	0.88	0.15	0.90	ವಾರ್ಷಿಕ	ಹಂತ-ಹಂತವಾಗಿ
9	ಆಲಸಂದಿ	0.71	0.15	0.58	30	40
10	ಹುರಳಿ	0.91	0.18	0.65	40	45
11	ಉದ್ದು	0.82	0.18	0.52	40	45
12	ಹೆಸರು	0.82	0.18	0.52	30	40
13	ಯೂಪಟೋರಿಯಂ	1.54	0.62	1.44	ವಾರ್ಷಿಕ	ಹಂತ-ಹಂತವಾಗಿ